ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

**ಸಿಸಿ ನಂ. 1755/2021, ಚಾಸಾ-01 , ಫ್ರಾಸಾ -1**

| | |
|---|---|
| ಹೆಸರು | ರವಿ ಕುಂದರ್ |
| ತಂದೆಯ ಹೆಸರು | ನಾಗಣ್ಣ ಕುಂದರ್ |
| ವಯಸ್ಸು | 50 ವರ್ಷ |
| ಕೆಲಸ | ಮೆಸ್ಕಾಂನಲ್ಲ್ ಮೆಕ್ಯಾನಿಕ್ . |
| ವಾಸ | ಕಡಂದಲೆ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 05-07-2023 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ-2 ರವರ ನನಗೆ ಗೊತ್ತು. ದಿನಾಂಕ 17-11-2020 ರಂದು ಸುಮಾರು ಬೆಳಗ್ಗೆ 11-30 ಕ್ಕೆ ಟೆಲ್ಲಿಸ್ ನಗರದಲ್ಲಿರುವ 2 ನೇ ಆರೋಪಿಯ ಮನೆಯ ಬಿಲ್ಲು ರೂ. 1,760/- ಬಾಕಿ ಇದ್ದು, ಅದನ್ನು ಅವರು ಮೆಸ್ಕಾಂಗೆ ಪಾವತಿ ಮಾಡದೆ ಇದ್ದರು. ನಂತರ ನಾನು ಮತ್ತು ಚಾಸಾ-2 ರವರು ಬೈಕಿನಲ್ಲಿ ಅವರ ಮನೆಗೆ ವಿದ್ಯುತ್ ಬಿಲ್ಲನ್ನು ಪಾವತಿ ಮಾಡಿ ಎಂದು ಹೇಳಲು ಹೋಗಿ ಬಿಲ್ಲನ್ನು ಪಾವತಿ ಮಾಡಿ ಎಂದು ತಿಳಿಸಿದಾಗ 1 ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದಿದ್ಧು, ಆ ವಿಚಾರವಾಗಿ ನಾವು ಮೇಲಾಧೀಕಾರಿಗಳಿಗೆ ತಿಳಿಸಿದಾಗ , ಅವರು ಕಂಬದಲ್ಲಿ ಮಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಎಂದು ತಿಳಿಸಿರುತ್ತಾರೆ. ಆಗ ನಾವು ವಿದ್ಯುತನ್ನು ಸ್ಥಗೀತಗೊಳಿಸಲು ಹೋದಾಗ ನಮ್ಮನ್ನು ಕಂಬಕ್ಕೆ ಹತ್ತಲು ಬಿಡದೇ 1 ನೇ ಆರೋಪಿಯು ನಮ್ಮನ್ನು ತಡೆದಿರುತ್ತಾರೆ. ನಂತರ ನಮ್ಮ ಬಳಿ ಬಂದು ಬೈಕ್ ಕೀಯನ್ನು ತೆಗೆದು ಹಾಕಿದರು. ಅಲ್ಲದೇ ನಮ್ಮ ಬಳಿಯಿದ್ದ ಡೀಸ್ ಕನೆಕ್ಷನ್ ಬಿಲ್ಲನ್ನು ಹರಿದು ಹಾಕಿರುತ್ತಾರೆ. ಅಲ್ಲದೇ ನಾನು ಧರಿಸಿದ ಯೂನೀಫಾರ್ಮ ಶರ್ಟ್ ಹಿಡಿದು ಎಳೆದು ಹಾಕಿ ನನ್ನ ಬಲಗೈಯನ್ನು ತಿರುಚಿರುತ್ತಾರೆ. ಅಲ್ಲದೇ ನನ್ನ ಬೈಕನ್ನು ಅಡ್ಡಗಟ್ಟಿ, ಬಿಳಿಸಿ ಜಖಂ ಗೊಳ್ಳುವಂತೆ ಮಾಡಿರುತ್ತಾರೆ.

2. ಆನಂತರ ಪೊಲೀಸ್ ಠಾಣೆಗೆ ಬಂದು ವಿಚಾರವನ್ನು ತಿಳಿಸಿ, ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ದಾಖಲಾಗಿರುತ್ತೇನೆ. ಆ ಸಮಯದಲ್ಲಿ ನಾನು ದೂರು ಹೇಳಿಕೆಯನ್ನು ಪೋಲಿಸರಿಗೆ ನೀಡಿರುತ್ತೇನೆ. ನಾನು ಸದರಿ ದೂರನ್ನು ದಾಖಲು ಮಾಡಿರುತ್ತೇನೆ. ಸದರಿ ದೂರನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ನನ್ನ ಹರಿದ ಅಂಗಿ ಹಾಗೂ ಡಿಸ್ ಕನೆಕ್ಷನ್ ಬಿಲ್ಲನ್ನು ಮತ್ತು ನನ್ನ ಬೈಕನ್ನು ಠಾಣೆಯಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ-11 ಮತ್ತು 12 ರವರು ಇದ್ದರು. ಸದರಿ ಸಮಯದಲ್ಲಿ ಸ್ವತ್ತು ಸ್ವಾಧೀನ ಮಹಜರನ್ನು ಅದೇ ದಿನ ಸುಮಾರು ಸಂಜೆ 06 ರಿಂದ 06-30 ಗಂಟೆಯವರೆಗೆ ಪೋಲಿಸರು ಜರುಗಿಸಿರುತ್ತಾರೆ. ಸದರಿ ಮಹಜರನ್ನು ನಾನು ಈಗ ನೋಡುತ್ತಿದ್ದು ನಿಪಿ-2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ನಾನು ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯ ಅಂಗಿಯನ್ನು ಮತ್ತು ಬಿಲ್ಲುಗಳನ್ನು ಎಂ.ಒ -1 ಮತ್ತು 2 ಎಂದು ಗುರುತಿಸಲಾಯಿತು.

(ಪಾಟೀಸವಾಲುಃ ಎಸ್.ಎಸ್.ಡಿ ವಕೀಲರಿಂದ ಃ-

ನಾವು ಆ ದಿನ ಮೇಸ್ಕಾಂ ಕಛೇರಿಯಿಂದ ಹೊರಡುವಾಗ ಸುಮಾರು 10 ಗಂಟೆ ಆಗಿತ್ತು. 2 ನೇ ಆರೋಪಿಯ ಮನೆಗೆ ಹೋಗುವಾಗ ಸುಮಾರು 50 ಮನೆಗೆ ಭೇಟಿ ಕೊಟ್ಟಿದ್ದೇವು. ಘಟನೆಯಾದ ನಂತರ ನಾವು ನೇರವಾಗಿ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಪೊಲೀಸ್ ಠಾಣೆಗೆ ಹೋದಾಗ ಸುಮಾರು 12 ರಿಂದ 12-15 ಸಮಯವಾಗಿತ್ತು. ಪೊಲೀಸ್ ಠಾಣೆಯಲ್ಲಿ ಆ ಸಮಯದಲ್ಲಿ ನಾನು ದೂರನ್ನು ದಾಖಲು

ಮಾಡಿರುತ್ತೇನೆ. ಸದರಿ ಸಮಯದಲ್ಲಿ ಪೊಲೀಸರು ನನ್ನ ಬೈಕನ್ನು ನೋಡಿರುತ್ತಾರೆ. ನಾನು ದೂರನ್ನು ದಾಖಲು ಮಾಡಿರುವುದು ಸರ್ಕಲ್ ಇನ್ಸ್ ಪೆಕ್ಟರ್ ಬಳಿ ಹಾಗೂ ಅವರು ನನ್ನ ಬೈಕನ್ನು ನೋಡಿರುತ್ತಾರೆ. ಆ ನಂತರ ಅವರು ಕೇಸ್ ದಾಖಲು ಮಾಡಲು ಆಸ್ಪತ್ರೆಗೆ ಹೋಗಿ ಸೇರಬೇಕೆಂದು ತಿಳಿಸಿರುತ್ತಾರೆ. ದೂರನ್ನು ದಾಖಲು ಠಾಣೆಗೆ ಹೋದಾಗ ಪೊಲೀಸರು ನಾನು ಧರಿಸಿದ್ದ ಹರಿದ ಬಟ್ಟೆ ಯನ್ನು ನೋಡಿರುತ್ತಾರೆ. ನಾನು ಧರಿಸಿದ ಬಟ್ಟೆಯ ಕಾಲರ್ ಸಹ ಹರಿದು ಹೋಗಿತ್ತು. 2 ನೇ ಆರೋಪಿಯು ನನಗೆ ಹಲ್ಲೆಯನ್ನು ಮಾಡಿರುತ್ತಾರೆ. ಸಾಕ್ಷಿ ಮುಂದುವರಿದು 2 ನೇಆರೋಪಿ ನನಗೆ ಹಲ್ಲೆಯನ್ನು ಮಾಡಿರುವುದಿಲ್ಲ ಬದಲಾಗಿ ನನ್ನ ಬೈಕನ್ನು ಅಡ್ಡ ಮಾಡಿರುತ್ತಾರೆ. ಚಾಸಾ-2 ರವರಿಗೆ 2 ನೇ ಆರೋಪಿ ಹಲ್ಲೆ ಮಾಡಿರುವುದಿಲ್ಲ. ಆರೋಪಿತರು ನನ್ನ ಬೈಕನ್ನು ಅಡ್ಡ ಬಿಳಿಸಿ ಎಳೆದುಕೊಂಡು ಹೋಗಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡುವಾಗ ಅವರು ಬೈಕನ್ನು ಅಡ್ಡ ಬಿಳಿಸಿ ಎಳೆದುಕೊಂಡು ಹೋಗಿರುತ್ತಾರೆ ಎಂದು ಹೇಳಿರುತ್ತೇವೆ. ಆಸ್ಪತ್ರೆಯಲ್ಲಿಯೂ ಸಹ ಈ ವಿಚಾರವನ್ನು ಹೇಳಿರುತ್ತೇನೆ. ಪೊಲೀಸರಿಗೆ ನಾನು ಹೇಳಿಕೆ ನೀಡುವಾಗ "ಈ ಸಮಯ ನಮ್ಮ ಬೈಕ್ ಹತೋಟಿ ತಪ್ಪಿ ಕೆಳಗೆ ಬಿದ್ದು ಬೈಕಿನ ಎದುರುಭಾಗ ಜಖಂ ಆಗಿರುತ್ತದೆ " ಎಂದು ಹೇಳಿಕೆ ನೀಡಿರುವುದಿಲ್ಲ. ಆ ಸಮಯದಲ್ಲಿ ನಾನು ನಿಪಿ-1 ನ್ನು ಆಸ್ಪತ್ರೆ ಯಲ್ಲಿ ನೋಡಿ ಓದಿ ಸಹಿ ಮಾಡಿರುತ್ತೇನೆ. ಅದರಲ್ಲಿ ಆರೋಪಿತರು ಬೈಕನ್ನು ಅಡ್ಡ ಬಿಳಿಸಿದ ಎಳೆದುಕೊಂಡು ಹೋದ ವಿಚಾರ ಇತ್ತು. ಚಾಸಾ-2 ರವರಿಗೆ 1 ನೇ ಆರೋಪಿ ಹಲ್ಲೆ ಮಾಡಿರುವುದಿಲ್ಲ. ನನಗೆ ಹಲ್ಲೆಯಿಂದ ಯಾವುದೇ ಗಾಯವಾಗಿರುವುದಿಲ್ಲ.

2. ಚಾಸಾ-2 ರವರ ವಿರುದ್ಧ ಆರೋಪಿತರು ದನಾಂಕ 20-11-2021 ರಂದು ಮೇಸ್ಕಾಂನ ಎ.ಇ.ಇ. ಗೆ ದೂರನ್ನು ನೀಡಿರುತ್ತಾರೆ. ಸದರಿ ದೂರಿನ ಪ್ರತಿಯನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಮೇಸ್ಕಾಂ ನವರ ನೀಡಿದ ಬಿಲ್ಲಲ್ಲಿ 15 ದಿನದ ನಂತರ ಡ್ಯೂ ದಿನಾಂಕವನ್ನು ಬಿಲ್ಲಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಹೌದು. 2 ನೇ ಆರೋಪಿಯ ಡಿಸೆಂಬರ್ ತಿಂಗಳ ಬಿಲ್ಲನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ಬಿಲ್ಲಿನ ದಿನಾಂಕ 16-12-2020 ಎಂದು ಹಾಗೂ ಡ್ಯೂ ಡೇಟ್ 30-12-2020 ಇದೆ ಎಂದರೆ ಹೌದು. ನಿಡಿ-1 ರಮೇಲೆ ಚಾಸಾ-2 ಮತ್ತು ನನ್ನ ಮೇಲೆ ತನಿಖೆ ಮಾಡಿರುತ್ತಾರೆ. ಆ ಪ್ರಕಾರ ನನ್ನನ್ನು ಕೈಕಂಬಕ್ಕೆ ಹಾಗೂ ಚಾಸಾ-2 ರವರನ್ನು ಮೂಡಬಿದ್ರಿಗೆ ವರ್ಗಾವಣೆ ಮಾಡಿರುತ್ತಾರೆ. 2 ನೇ ಆರೋಪಿಯ ಮನೆಗೆ ವಿದ್ಯುತ್ ನ್ನು ಡಿಸ್ ಕನೆಕ್ಟ್ ಮಾಡಲು ನನಗೆ ಬರವಣಿಗೆಯ ಆದೇಶವಿತ್ತು. ಪ್ರಕರಣ ದಾಖಲಾದಾಗ ಎಂ.ಒ-2 ಬಿಲ್ಲುಗಳನ್ನು ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಗೆ ಹೋದಾಗ ಬೈಕನ್ನು ಠಾಣೇಯಲ್ಲಿಯೇ ಇಟ್ಟೆ ಹೋಗಿ ಎಂದು ಪೊಲೀಸರು ತಿಳಿಸಿದ ಮೇರೆಗೆ ನಾನು ಬೈಕನ್ನು ಅಲ್ಲಿಯೇ ನಿಲ್ಲಿಸಿ ಆಸ್ಪತ್ರೆಗೆ ಹೋಗಿರುತ್ತೇನೆ. ಮೇಸ್ಕಾಂ ನ ಬಿಲ್ಲುಗಳನ್ನು ಸರಿಯಾಗಿ ಬರುತ್ತಿಲ್ಲ ಎಂದು ಹೇಳಿ ಆರೋಪಿತರು ಚಾಸಾ-2 ರವರ ವಿರುದ್ದ ದೂರನ್ನು ದಾಖಲು ಮಾಡಿದ್ದಾರೆ ಎಂದರೆ ಹೌದು. ಸದರಿ ದೂರನ್ನು ದಾಖಲು ಮಾಡಿರುವ ಕಾರಣ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಕರಣ ದಾಖಲು ಮಾಡಲು ಪೋಲಿಸರು ಹರಿದ ಅಂಗಿ ಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಹಾಗಾಗಿ ನನ್ನ ಅಂಗಿಯನ್ನು ಹರಿದು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ